Sri MOHAMED ALI.—No, Sir.

ಶ್ರೀ ಎ. ಮುನಿಯಪ್ಪ.—ಪರ್ಮಿಟ್‌ಗಳನ್ನು ಕೊಡುವಾಗ ಯಾವ ಅರ್ಹತೆಗಳಿದ್ದರೆ ಕೊಡುತ್ತೀರಿ ?

ಅಧ್ಯಕ್ಷರು.—"Addicts" ಎಂದರೆ ಕುಡಿಯುವ ಚಟವಿದ್ದವರಿಗೆ ಕೊಡುತ್ತೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

Sri K. S. SURYANARAYANA RAO.—Is it the opinion of Government that addicts are those who are under medical advice ?

Mr. SPEAKER.—It is outside the scope of this question.

ಶ್ರೀ ಡಿ. ಟಿ. ಸೀತಾರಾಮರಾವ್.—ಅಭ್ಯಾಸವಿರುವವರಿಗೆ ಕೊಡುತ್ತಾರೆಯೇ ಅಥವಾ ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟರೆ ಹೊಸಬರಿಗೂ ಕೊಡುತ್ತಾರೆಯೇ ?

ಅಧ್ಯಕ್ಷರು.—ಉತ್ತರದಲ್ಲಿ addicts ಎಂದಿದೆ. Addicts ಎಂದರೆ ಅಭ್ಯಾಸವಿರುವವರು ಎಂದು ಅರ್ಥವಾಗುತ್ತದೆ.

ಶ್ರೀ ಡಿ.ಟಿ. ಸೀತಾರಾಮರಾವ್.—1955-56ರಲ್ಲಿ 27 ಜನರಿಗೆ ಪರ್ಮಿಟ್ ಕೊಟ್ಟಿದೆ ಎಂದು ಕಂಡು ಬರುತ್ತದೆ, ಇದನ್ನು ಕುಡುಕರಿಗೆ ಕೊಡುತ್ತಿದ್ದೀರೋ ಅಥವಾ ಹೊಸದಾಗಿ ಕುಡಿಯುವುದನ್ನು ಕಲಿಯತಕ್ಕವರಿಗೆ ಕೊಡುತ್ತೀರೋ ?

Sri MOHAMED ALI.—It means addicts naturally.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕುಡಿಯುವ ಅಭ್ಯಾಸವಿರುವವರಿಗೆ ಪರ್ಮಿಟ್ ಕೊಡುತ್ತಾರೆಂದು ಅಪ್ಪಣೆಯಾಗಿದೆ. 'ಫ್ಲೂ' ಬಂದ ಕಾರಣ ಜನಗಳಿಗೆ ಕುಡಿಯುವ ಅಭ್ಯಾಸವಾಗಿಲ್ಲವೇ ?

Mr. SPEAKER.—Order, Order.

Sri T. TAREGOWDA.—Are there permit-holders who are relatives of excise contractors, Sir ?

Sri MOHAMED ALI.—Government is not aware of any such case.

Sri ANNA RAO GANAMUKHI.—May I know whether there is an increase or a decline in the number of addicts year by year ?

ಅಧ್ಯಕ್ಷರು.—1953-54ರಲ್ಲಿ 22, 1954-55ರಲ್ಲಿ 28 ಮತ್ತು 1955-56ರಲ್ಲಿ 27 ಪರ್ಮಿಟ್‌ಗಳನ್ನು ಕೊಟ್ಟಿದೆ ಎಂದು ಉತ್ತರದಲ್ಲಿಯೇ ತಿಳಿಸಿದ್ದಾರೆ.

Sri ANNA RAO GANAMUKHI.—May I know whether any case has been registered against addicts for transporting brandy and arrack to outside places, Sir ?

Mr. SPEAKER.—Question time is over.

Business of the House.

Sri S. NIJALINGAPPA (Chief Minister).—Before we proceed with the next item in the agenda, I would like to make a suggestion to the House. Yesterday, we had three Demands under discussion and we are continuing them today. If this state of affairs continue, I am afraid it will be very hard for the members to express themselves on all the Demands that are being made. I would appeal to the members to offer their remarks in such a way that on a particular day, we may be able to finish the Demands prescribed for that day.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈಗ ಸಭಾನಾಯಕರು ಡಿಮ್ಯಾಂಡುಗಳ ಬಗ್ಗೆ ಒಂದು ವಿಷಯವನ್ನು ಅಪ್ಪಣೆ ಕೊಡಿಸಿದರು. ಆದರೆ ಡಿಮ್ಯಾಂಡುಗಳ ವಿಷಯದಲ್ಲಿ ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ option ವಿರೋಧಪಕ್ಷದವರಿಗೆ ಇರಬೇಕು ಎಂದು ನಿನ್ನೆಯ ದಿನ ಮಾನ್ಯ ಅಧ್ಯಕ್ಷರೂ ಕೂಡ ಅಪ್ಪಣೆ ಕೊಡಿಸಿದರು. ಈ ಡಿಮಾಂಡುಗಳಲ್ಲಿ ಯಾವಯಾವದರ ಮೇಲೆ ಎಷ್ಟೆಷ್ಟು ಚರ್ಚೆಯಾಗಬೇಕು ಎನ್ನುವುದನ್ನು ತೀರ್ಮಾನಮಾಡುವಾಗ ಆ ವಿಷಯವನ್ನು ವಿರೋಧಪಕ್ಷದವರಿಗೆ ಬಿಡತಕ್ಕದ್ದು ನೂಕ್ತ. ಈಗ 12 ದಿನಗಳು ಮಾತ್ರ ಡಿಮಾಂಡುಗಳಿಗೆ ಕೊಟ್ಟಿರುವುದರಿಂದ ಕಾಲ ಬಹಳ ಕಡಮೆಯಾಗಿ ಅದರಿಂದ ನಮಗೆ ಸ್ವಲ್ಪ ನಷ್ಟವಾಗುತ್ತದೆ ; ಸರ್ಕಾರದ ಕಡೆಯವರಿಗೆ ಏನೂ ನಷ್ಟವಾಗುವುದಿಲ್ಲ. ನಮಗಿರುವ ಅವಕಾಶದಲ್ಲಿ ಎಷ್ಟುಮಟ್ಟಿಗೆ ಚರ್ಚೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾತ್ರ ಆಗುತ್ತದೆ. ಈಗ ನಮ್ಮ ಮುಂದಿರುವ ಡಿಮ್ಯಾಂಡುಗಳು, Police, Administration of Justice and Jails—ಇವುಗಳಿಗೆ ಸಂಬಂಧಪಡುತ್ತವೆ. ಇವು ದೇಶದ ನೆಮ್ಮದಿಗೆ ಸಂಬಂಧಪಟ್ಟಂಥ ದೊಡ್ಡ ವಿಷಯಗಳು. ಇವುಗಳ ಮೇಲೆ ಅನೇಕ ಸದಸ್ಯರು ಮಾತನಾಡುವ ಅಭಿಲಾಷೆಯನ್ನು ಹೊಂದಿರುತ್ತಾರೆ. ಆದುದರಿಂದ ಈ ದಿನ ಇವುಗಳ ಮೇಲೆ ಚರ್ಚೆಯನ್ನು ನಡೆಸಿ, General Administration ಡಿಮ್ಯಾಂಡನ್ನು ನಾಳೆಯ ದಿನ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ. ನಾಳೆಯಿಂದ ಡಿಮ್ಯಾಂಡುಗಳನ್ನು ತೆಗೆದುಕೊಳ್ಳುವಾಗ ನಮ್ಮ ವಿರೋಧಪಕ್ಷದ ನಾಯಕರೊಂದಿಗೆ ಸಮಾಲೋಚನೆ ಮಾಡಿ ಯಾವ ಯಾವ ಡಿಮಾಂಡನ್ನು ಯಾವ ಯಾವ ದಿನ ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸಿ, ಅನುಕೂಲವನ್ನು ಕಲ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ವಿರೋಧಪಕ್ಷದವರಲ್ಲಿ ಅನೇಕ ಮಂದಿ ಸದಸ್ಯರು ನಿನ್ನೆಯ ದಿನ ಸಭೆಯ ಮುಂದೆ ಮುಂಡಿಸಿದ ಡಿಮ್ಯಾಂಡುಗಳ ಮೇಲೆ ಮಾತನಾಡಬೇಕಾಗಿರುವುದರಿಂದ, ಒಬ್ಬೊಬ್ಬರಿಗೆ 10-15 ನಿಮಿಷಗಳ ಕಾಲ ಕೊಟ್ಟರೂ ಇಡೀ ದಿನವೆಲ್ಲ ಚರ್ಚೆ ನಡೆಯಬೇಕಾಗುತ್ತದೆ. ಈ ಕಾರಣದಿಂದ General Administration ಮೇಲೆ ಚರ್ಚೆಯನ್ನು ನಾಳೆ ದಿವಸ ತೆಗೆದುಕೊಂಡು ಈ ದಿವಸ ಪೂರ್ತಿಯಾಗಿ ಈ ಮೂರು ಡಿಮ್ಯಾಂಡುಗಳ ಮೇಲೆ ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸಭಾನಾಯಕರನ್ನು ತಮ್ಮ ಮೂಲಕ ಕೇಳಿಕೊಳ್ಳುವುದರ ಜೊತೆಗೆ, ಅಧ್ಯಕ್ಷರೂ ನಮಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ; ಮತ್ತು ನಮ್ಮ ಪಕ್ಷದ ನಾಯಕರನ್ನು consult ಮಾಡಿ ನಾಳೆದ್ದುರಿಂದ ಡಿಮ್ಯಾಂಡುಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೇನೆ.

Mr. SPEAKER.—I am not aware that there is some inconvenience in regard to the arrangement of discussion of Demands. I was really very anxious yesterday to finish the three Demands, but it could not be done and the time-table has not been kept up, as a large number of members stood up and wanted to take part. I was also not aware that, in the old Mysore Legislative Assembly, no Demand which was fixed for a certain day could be postponed. Elsewhere, in other Assemblies, this is not the practice. In Bombay, If we could not finish a Demand on a particular day, it used to be postponed and considered the next day. There was no trouble at all. But then, if there is going to be any trouble, I would not like to deviate from the time-table. I would like to stick-up to it. When I made the time-table, I could not get the Leader of the Opposition. I rang him up, but he was not available. Then I rang up Sri Puttaramiya and he may remember that I had a talk with him on this subject. After consultation, I fixed up the time-table. If the time-table does not suit the Opposition, I can make a slight change. Because, after all, I have to cater in this respect to the Opposition also and the view of the Leader of the Opposition must be respected as far as possible. If his view is unreasonable, it cannot be respected, but so far as it is reasonable it should be respected by me. I have no objection, if the Leader of the Opposition were to tell me that I should make a change in the time-table. I will meet it as far as possible. But since I have adjourned the discussion yesterday, today we shall take up this and I hope the Hon'ble Members will finish it by 4-30 or 5. Then we will be able to take up "General Administration". In fact, though there is going to be some trouble, I would request the Treasury Benches and the party-in-power to accommodate and put up with such difficulties.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಪ್ರಾರಂಭವಾಗಿ ಇಂದು ಮುಂದಕ್ಕೆ ತಂದಿರತಕ್ಕಂಥ ಈ ಚರ್ಚೆಯ ಬಗ್ಗೆ ಇರುವ ವಿಚಾರಗಳನ್ನು ಈಗ ನಾನು ಹೇಳುತ್ತೇನೆ. ನ್ಯಾಯಾಂಗ ಶಾಖೆಯ ವಿಚಾರವಾಗಿ ಮಾತನಾಡುವ ದಾಗಲಿ ಜೈಲ್ ಖಾತೆಯ ವಿಚಾರವಾಗಿ ಮಾತನಾಡುವ ದಾಗಲಿ ಅಥವಾ ಪೋಲಿಸ್ ಖಾತೆಯ ವಿಚಾರವಾಗಿ ಮಾತನಾಡುವದಾಗಲಿ ಇದುವರೆಗೆ ಮಾನ್ಯ ಸದಸ್ಯರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಅಭಿಪ್ರಾಯ ಗಳನ್ನು ಬಿಟ್ಟು ಉಳಿದ ಹೊಸ ವಿಚಾರಗಳನ್ನು ನಾನು ಹೇಳುತ್ತೇನೆ. ಈಗ ನ್ಯಾಯಾಂಗ ವಿಚಾರವಾಗಿ ಹೇಳುವದಾದರೆ ಪ್ರಜೆಗಳಿಗೆ ನ್ಯಾಯ ತೀರ್ಪುಗಳು ದೊರೆಯುವದಕ್ಕೆ ಬಹಳ ತಡವಾಗುತ್ತಿದೆ. ಹೆಚ್ಚು ಜಡ್ಜಿಗಳನ್ನು ನೇಮಕಮಾಡದೇ ಇರುವದೇ ಇದಕ್ಕೆ ಮುಖ್ಯ ಕಾರಣಗಾಗಿದೆ.

Sri J. H. SHAMSUDDIN (Honavar).—On a point of order, Sir. Are we continuing discussion of the Demands? I was on my legs yesterday, Sir, and I have a preference over other members.

Mr. SPEAKER.—We have not as yet reached that part of the business.

Sri M. C. NARASIMHAN (Kolar Gold Fields).—I want a clarification on a simple matter, Sir. I have given a motion for a half-hour debate on unemployment. It is being postponed every time. Iwould like to know whether it will be taken up at the end of to-day's business?

Mr. SPEAKER.—Yes. It will be taken up today.

Sri M. C. NARASIMHAN.—My fear is that the Chief Minister may have some other engagement in the course of the day and he may not be able to be present during the debate on this question.

Mr. SPEAKER.—If he is not present in the House, we will have to adjourn it.

Sri M. C. NARASIMHAN.—Will it go for some other day?

Mr. SPEAKER.—Yes, we will take it up some other day.

ಶ್ರೀ ಜಿ. ಎಸ್. ಜೊಮ್ಮೇಗೌಡ (ಮಂಡ್ಯ).—ನಮ್ಮ ದೇಶದಲ್ಲಿ ಮುಖ್ಯವಾದ ನಾಡಹಬ್ಬವೆಂದು ನಮ್ಮ ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಹುಟ್ಟಿದ ದಿನದ ಹಬ್ಬವನ್ನು ಇಪ್ಪು ದಿವಸಗಳವರೆಗೆ ಆಚರಿಸುತ್ತಾ ಬಂದಿದ್ದೇವೆ. ಮಹಾ ರಾಜರವರಾಗಿದ್ದಾಗ ಪ್ರಜೆಗಳು ರಾಜಭಕ್ತಿಯನ್ನು ತೋರಿಸುತ್ತಿದ್ದರು. ಈಚೆಗೆ ಅವರು ರಾಜಪ್ರಮುಖ ರಾಗಿದ್ದಾಗಲೂ ಹಾಗೆಯೇ ನಡೆಯುತ್ತಾ ಬಂದಿದೆ. ಈಗ ಅವರು ನಮ್ಮ ಗವರ್ನರ್ ಆಗಿರುವದರಿಂದ ನಾಳೆಯ ದಿವಸ ಇರುವ ಅವರ ಹುಟ್ಟಿದಹಬ್ಬವನ್ನು ಆಚರಿಸುವದಕ್ಕೋಸ್ಕರ ನಾಳೆಯ ದಿವಸ ರಜಾ ಕೊಡ ಬೇಕೆಂದು ನಾನು ಪ್ರಾರ್ಥಿಸಿ ಕೊಳ್ಳುತ್ತೇನೆ.

Sri M. P. PATIL (Minister for Revenue).—I rise on a point of order, Sir. I think the Hon'ble Member is referring to the birthday of the Maharaja, who is our Governor. I would like to know whether this point can be raised here at all.

Mr. SPEAKER.—He has only raised the point. I am not allowing a discussion. This is a point to be discussed with and settled by the Government itself. It is not my province. After all, in this House there is a practice that members can make representations after question hour.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾಳೆಯ ದಿವಸ ಈ ನಾಡಹಬ್ಬವನ್ನು ಆಚರಿಸುವದಕ್ಕಾಗಿ ರಾಜ್ಯ ಕ್ಕೆಲ್ಲಾ ನಾಳೆ ರಜಾ ಕೊಡಬೇಕೆಂದು ತಮ್ಮ ಮೂಲಕ ಸಭಾನಾಯಕರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶಾಸನ ಸಭೆಗೆ ಅಷ್ಟೇ ರಜಾ ಕೊಡ ಬೇಕೋ ಅಥವಾ ಎಲ್ಲಾ ಇಲಾಖೆಗಳಿಗೂ ನಾಳೆ ರಜಾ ಕೊಡಬೇಕೆಂದು ಹೇಳುತ್ತೀರೊ ?

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಲ್ಲಾ ಇಲಾಖೆ ಗಳಿಗೂ ರಜಾ ಕೊಡಬೇಕು ; ಮತ್ತು ಶಾಸನ ಸಭೆಗೂ ಕೂಡ ರಜಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಸಭೆಗೆ ರಜಾ ಕೊಡಬೇಕು ಎಂಬುದನ್ನು ನಾನು ಪರಿಶೀಲನ ಮಾಡುವೆನು. ಆದರೆ ರಾಜ್ಯಕ್ಕೆಲ್ಲಾ ರಜಾ ಕೊಡಬೇಕೆಂಬುದು ನನಗೆ ಸಂಬಂಧಪಟ್ಟದ್ದಾಗಿರುವದಿಲ್ಲ. ಅದನ್ನು ಸರ್ಕಾರದ ವರು ವಿಚಾರ ಮಾಡಬೇಕಾಗುವದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಶ್ರೀಮತ್ ಮಹಾರಾಜರವರ ಬಗ್ಗೆ ನಮಗೆಲ್ಲಾ ತುಂಬ ಗೌರವ ಇದೆ. ಅವರು ಈಗ ನಮ್ಮ ರಾಜ್ಯದ ಗವರ್ನರರಾಗಿದ್ದಾರೆ. ಗವರ್ನರವರ ಹುಟ್ಟಿದ ಹಬ್ಬ ಕ್ಕೋಸ್ಕರ ರಜಾ ಕೊಡುವುದು ಸೂಕ್ತವಾಗುವುದಿಲ್ಲ. ಒಂದು ರಾಜ್ಯದಲ್ಲಿ ಗವರ್ನರರ ಹುಟ್ಟಿದ ಹಬ್ಬದ ನಲು ವಾಗಿ ರಜಾ ಕೊಟ್ಟರೆ ಅದರಂತೆಯೇ ಎಲ್ಲಾ ಕಡೆಗೂ ಕೊಡಬೇಕಾಗುತ್ತದೆ. ಬಹುಶಃ ನಾಳೆಯ ದಿವಸ ರಜಾ ತೆಗೆದುಕೊಂಡು ಇಷ್ಟೊಂದು ಜನ ಕೆಲಸ ಮಾಡದೇ ಇದ್ದರೆ ಗವರ್ನರರಿಗೇ ಅನಮಾಧಾನ ವಾದೀತು ಎಂದು ಅನ್ನಿಸುತ್ತದೆ. ಯಾಕೆಂದರೆ ಅವರು ಕರ್ತವ್ಯನಿಷ್ಠರು. ನಾಳೆಯ ದಿವಸ ರಜಾ ಕೊಡುವುದು ಸೂಕ್ತವಾಗಲಾರದೆಂದು ಸರ್ಕಾರದ ಅಭಿಪ್ರಾಯ ವಾಗಿದೆ.

Sri J. H. SHAMSUDDIN.—I rise to support all the three Demands before the House. In doing so, I shall try to make certain suggestions for the consideration of Government.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಒಬ್ಬ ಸದಸ್ಯರು ಭಾಷಣವನ್ನು ಪ್ರಾರಂಭಿಸಿ ಇಷ್ಟು ದೂರ ಹೋಗಿರುವಾಗ ಮಧ್ಯದಲ್ಲಿ ಇನ್ನೊಬ್ಬ ಸದಸ್ಯರು ಮಾತನಾಡುವುದನ್ನು ಪ್ರಾರಂಭಿಸ ಬಹುದೇ ?

ಅಧ್ಯಕ್ಷರು.—ಶ್ರೀ ಕೆಂಚಪ್ಪನವರು ಕ್ಯಾಲೆಂಡರ ಬದಲುಮಾಡುವ ವಿಚಾರದಲ್ಲಿ ಮಾತನಾಡುತ್ತಿದ್ದ ರೆಂದು ನಾನು ತಿಳಿದುಕೊಂಡಿದ್ದೆನು. ಡಿಮಾಂಡ್ಸ್ ಮೇಲೆ ಭಾಷಣ ಮಾಡಲು ಅವರಿಗೆ ನಾನು ಹೇಳಲಿಲ್ಲ. ಇಂದು ಶ್ರೀ ಶಂಷುದ್ದೀನರು ಮೊದಲು ಮಾತನಾಡ ಬೇಕೆಂದು ನಿನ್ನೆಯ ದಿವಸವೇ ನಾನು ಹೇಳಿದ್ದೇನೆ.

BUDGET FOR 1957-58—DEMANDS FOR GRANTS

No. 15-Administration of Justices, No. 16-Jails and Convicts Settlements, No. 17-Police.

(*Debate continued.*)

Sri J. H. SHAMSUDDIN (Honawar).—Sri, I rise to support the Demands before the House and while doing so, I make certain suggestions for the consideration of the Government Now, Sir, I feel that so far as all the three Demands are concerned, they are not opposed by the Opposition even though they tried to oppose it. The first Demand relates to "27 Administration of Justice". None of the Opposition Members are opposed to this Demand. Everybody directly or indirectly suggested that the Demands may be voted. Of course, there was vehement opposition from Sri Puttaramaiah that he cannot vote for the Police Demand. But I think he did not mean that because when we think that administration of Justice is essential, then an important element in the administration is dispensation of criminal justice and no criminal justice can be dispensed with without the aid of the Police. Therefore, he agrees to the necessity of administration of Justice through criminal courts, and he indirectly supports and feels the necessity of the police force to bring these culprits to book before the courts. Then the second Demand regarding "Jails and Convict Settlements" is also linked up with the administration of Justice. When a judge pronounces a judgment upon convicts, they ought to be properly accommodated in the respective jails and settlements. Therefore, the sum total of the speeches that we have heard yesterday from the Opposition made an impression on me that they all indirectly agree to these Demands and partly directly also. So, I felt, when I listened to the speeches with the rapt attention that they deserved, that they were complaining or rather they were giving an impression that it was a case of not something being rotten